ಸಿ.ಸಿ.ನಂಃ 3643/22 ಪಿಡಬ್ಲ್ಯು.1

<u>ದಿನಾಂಕಃ 03.06.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋದಿಸಲಾಯಿತು.</u>

## <u>ಪಾಟೀಸವಾಲುಃ ಆರೋಪಿಯ ಪರ ಶ್ರೀ ಎಸ್ ಎಸ್ ಜಿ ವಕೀಲರಿಂದಃ</u>

1. ನನ್ನ ಚರಾಸ್ಥಿಗಳ ಬಗ್ಗೆ ನಾನು ಆರ್ ಟಿ ಸಿ ಕೊಟ್ಟಿದ್ದೇನೆ. ನಾನು ಹಾಜರುಪಡಿಸಿದಂತಾ ಆರ್ ಟಿ ಸಿ ಅಲ್ಲಿ ಶುಂಠಿ ಬೆಳೆ ನಮೂದಾಗಿಲ್ಲ ಎಂದರೆ ಸರಿ. ನಾನು 2022-23 ನೇ ಸಾಲಿನ ಆರ್ ಟಿ ಸಿ ಹಾಜರು ಪಡಿಸಿಲ್ಲ ನಾನು 2023-24 ರ ಆರ್ ಟಿ ಸಿ ಕೊಟ್ಟಿದ್ದೇನೆ ಎಂದರೆ ಸರಿ. 2022 ನೇ ಸಾಲಿನಲ್ಲಿ ನನ್ನ ಬಳಿ 3 ಲಕ್ಷ ಹಣ ಇರಲಿಲ್ಲ ಎಂದರೆ ಸರಿಯಲ್ಲ. ನಾನು ನಿವೃತ್ತ ನೌಕರ ಎಂದರೆ ಸರಿ. ನಾನು ಮನೆ ಕಟ್ಟುವ ಸಲುವಾಗಿ ನನ್ನ ನಿವೃತ್ತಿಯ ದಾಖಲೆಗಳ ಆಧಾರದ ಮೇಲೆ ಸಾಲ ಪಡೆದುಕೊಂಡಿದ್ದೇನೆ ಎಂದರೆ ಸರಿ. ನಾನು 2016 ರಲ್ಲಿ ನಿವೃತ್ತನಾಗಿದ್ದೇನೆ ಹಾಗೂ ಮನೆಯನ್ನು 2008 ರಲ್ಲಿ ಮನೆ ಕಟ್ಟಿಸಿದ್ದೇನೆ ನಾನು ಮನೆ ಮೇಲೆ ತೆಗೆದುಕೊಂಡ ಸಾಲ ತೀರಿದೆ. ಮನೆಯ ಸಾಲ ತೀರಿದ ನಂತರ ನಾನು ಟಾಪ್ ಅಪ್ ಲೋನ್ ತೆಗೆದುಕೊಂಡಿಲ್ಲ ಪರ್ಸನಲ್ ಲೋನ್ ತೆಗೆದುಕೊಂಡಿದ್ದೇನೆ. ನಾನು 2020 ರಲ್ಲಿ ರೂ 3,50,000/- ಪರ್ಸನಲ್ ಲೋನ್ ತೆಗೆದುಕೊಂಡಿದ್ದೆ. ಅದೇ ಸಾಲವನ್ನು ನನ್ನ ಪಿಂಚಣಿ ಹಣದಲ್ಲಿ ಕಟಾವು ಮಾಡುತ್ತಿದ್ದಾರೆ ಎಂದರೆ ಸರಿ. ಸದರಿ ಸಾಲ ಈಗಲೂ ಬಾಕಿ ಇದೆ ಎಂದರೆ ಸರಿ. ನಾನು ಇನ್ನೊಬ್ಬರ ಬಳಿ ಸಾಲ ಪಡೆದುಕೊಳ್ಳುತ್ತೇನೆಯೇ ಹೊರತು ನನಗೆ ಇನ್ನೊಬ್ಬರಿಗೆ ಸಾಲ ಕೊಡುವ ಸಾಮರ್ಥ್ಯ ಇಲ್ಲ ಎಂದರೆ ಸರಿಯಲ್ಲ. ನನ್ನದೇ ಸಾಲ ಬಾಕಿ ಇರುವಾಗ ಆರೋಪಿಗೆ ಸಾಲ ಕೊಡುವ ಪ್ರಶ್ನೆ ಉದ್ಭವಿಸುವುದಿಲ್ಲ ಎಂದರೆ ಸರಿಯಲ್ಲ.

2. ಆರೋಪಿಯು ನನ್ನಿಂದ ದಿನಾಂಕ 13.06.2022 ರಂದು ಯಾವುದೇ ಸಾಲವನ್ನು ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಯಾವುದೇ ಸಾಲವನ್ನು ಪಾವತಿ ಮಾಡಿಲ್ಲ ಎಂದರೆ ಚೆಕ್ ಕೊಟ್ಟಿದ್ದೇನೆ. ನಾನು ಆರೋಪಿಗೆ ಕಳುಹಿಸಲಾದ ನಿಪಿ-3/5 ಎ ನೋಟೀಸ್ ಆರೋಪಿಗೆ ಜಾರಿ ಆಗಿಲ್ಲ ಎಂದರೆ ಸರಿಯಲ್ಲ. ನಾನು ಆರೋಪಿಗೆ ಕಳುಹಿಸಿದ ನೋಟೀಸ್ ಜಾರಿಯಾಗದ ಕಾರಣ ಅವರು ನನಗೆ ಉತ್ತರ ನೀಡಲು ಅವಕಾಶ ಇರಲಿಲ್ಲ ಎಂದರೆ ಸರಿಯಲ್ಲ. ನಿಪಿ-5 ರ ಅಂಚೆ ಲಕೋಟೆಯ ಮೇಲೆ ಏಳು ದಿನಗಳ ಬಟವಾಡದ ಸಮಯದಲ್ಲಿ ಸಿಗದ ಕಾರಣ ವಾಪಸ್ಸು ಕಳುಹಿಸಲಾಗಿದೆ ಎಂದು ನಮೂದಿಸಲಾಗಿದೆ ಎಂದರೆ ಸಾಕ್ಷಿ ಆರೋಪಿಯು ಅಲ್ಲೇ ಇದ್ದರೂ ತೆಗೆದುಕೊಂಡಿಲ್ಲ ಎಂದು ನುಡಿಯುತ್ತಾರೆ. ನಾನು ಆರೋಪಿಗೆ ನೋಟೀಸ್

ಕಳುಹಿಸಿದ್ದೇನೆ ಎನ್ನಲಾದಂತಹ ಸಮಯದಲ್ಲಿ ಅವರಿಗೆ ಆರೋಗ್ಯ ಸರಿ ಇಲ್ಲದೆ ಆಸ್ಪತ್ರೆಗೆ ದಾಖಲಾಗಿದ್ದರು ಎಂದರೆ ಸರಿಯಲ್ಲ. ಅವರು ಅದೇ ವಿಳಾಸದಲ್ಲಿ ಇದ್ದದ್ದನ್ನು ನಾನೇ ನೋಡಿದ್ದೇನೆ. ಸದರಿ ವಿಳಾಸದಲ್ಲಿ ಆರೋಪಿ ಇರುವುದನ್ನು ನಾನು ನೋಡಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ–5 ರಲ್ಲಿ Intimation Deliver ಎಂಬ ಷರಾ ಇಲ್ಲ ಎಂದರೆ ಸರಿಯಲ್ಲ. Intimation Deliver ಎಂಬ ಷರಾ ನಿಪಿ–5 ರ ಮೇಲೆ ಇಲ್ಲದಿರುವುದರಿಂದ ನನ್ನ ಈ ಪ್ರಕರಣ ಊರ್ಜಿತ ಅಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು ಅರೋಪಿ ನಡುವೆ ಯಾವುದೇ ವ್ಯವಹಾರ ನಡೆಯದೇ ಇದ್ದರು ಕೂಡ ನಾನು ಅನ್ಯತಾ ಪಾಯಿದೆ ಹೊಂದುವ ಉದ್ದೇಶದಿಂದ ಆರೋಪಿಯ ವಿರುದ್ಧ ಸುಳ್ಳು ಪ್ರಕರಣ ಹೂಡಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.,

(ಜೈಬುನ್ನೀಸಾ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ.,ಹುಣಸೂರು.